ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 25.07.2023.

**<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>**

1 ನೇ ಪ್ರತಿವಾದಿ ತನ್ನ ವಕೀಲರ ಮುಖಾಂತರ ಏನು ಪ್ರತಿವಾದ ಪತ್ರ ಸಲ್ಲಿಸಿರುತ್ತಾನೆ ಎಂದು ಹಾಗೂ ಅದರಲ್ಲಿರುವ ಸಂಗತಿಗಳನ್ನು ನಾನು ಕೇಳಿ ತಿಳಿದುಕೊಂಡಿಲ್ಲಾ. ಖಾಜಾ ಇಕ್ಬಾಲ ಶೇಖ್ ಮತ್ತು ಮಹ್ಮದ್ ಅನಿಫ್ ಅಬ್ದುಲ್ ಖಯುಮ್ ರವರ ಬಗ್ಗೆ ನನಗೆ ಗೊತ್ತಿಲ್ಲಾ. ನನ್ನ ತಾಯಿ ನಜುಮುನ್ನಿಸಾ ರವರು ದಿಃ 02.01.2009 ರಂದು 1 ನೇ ಪ್ರತಿವಾದಿಗೆ ಹಿಭಾ ಮಾಡಿಕೊಟ್ಟ ಬಗ್ಗೆ ನಾನು ವಿಚಾರಣೆ ಮಾಡಿಲ್ಲಾ. ನಾನು ನನ್ನ ಪಾಲನ್ನು 1 ನೇ ಪ್ರತಿವಾದಿ ಹತ್ತಿರ ಕೇಳಲು ಹೋದಾಗ ಅವರು, ನನ್ನ ತಾಯಿ ನಜುಮುನ್ನಿಸಾ ರವರು ಮೇಲೆ ದಿನಾಂಕದಂದು ದಾವಾ ಸ್ವತ್ತುಗಳನ್ನು ನನಗೆ ಹಿಭಾ ಮಾಡಿಕೊಟ್ಟಿರುತ್ತಾರೆ ಎಂದು ನನಗೆ ಹೇಳಿರುತ್ತಾರೆ, ಆ ಕಾರಣ ನಾನು ಈ ದಾವೆ ಮಾಡಿರುತ್ತೇನೆ. ಅಲ್ಲಿಯವರೆಗೆ ನನಗೆ ಹಿಭಾ ಮಾಡಿಕೊಟ್ಟಿದ್ದು ಗೊತ್ತಿರಲಿಲ್ಲ. ಸಾಕ್ಷಿ ಮುಂದುವರೆದ ಈ ಕೇಸ್ ಹಾಕಿದ ನಂತರ ನನಗೆ ಹಿಭಾದ ಸಂಗತಿ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಕೇಸ್ ಹಾಕುವುಕ್ಕಿಂತ ಮೊದಲು ಸದರಿ ಸಂಗತಿ ಬಗ್ಗೆ ಗೊತ್ತಾಗಿರುತ್ತದೆ ಎಂದು ನನಗೆ ಗೊತ್ತಿಲ್ಲಾ. ಇಲ್ಲಿಯವರೆಗೆ ನಾನು ಸದರಿ ಹಿಭಾವನ್ನು ರದ್ದುಪಡಿಸಲು ಯಾವುಕೇ ಕ್ರಮ ಕೈಗೊಂಡಿಲ್ಲಾ, ಆದರೆ ಈ ದಾವೆ ಮಾಡಿರುತ್ತೇನೆ.

ಸದರಿ ಹಿಭಾವನ್ನು ರದ್ದುಪಡಿಸಬೇಕೆಂಬ ಈ ದಾವೆಯಲ್ಲಿ ಪ್ರಾಥಿರ್ಸಿಕೊಂಡಿಲ್ಲಾ ಎಂದರೆ ಸರಿ. ದಿಃ 25.01.1971 ರಂದು ನನ್ನ ತಾಯಿ ದಾವಾ ಸ್ವತ್ತನ್ನು ಖರೀದಿಸಿರುತ್ತಾರೆ ಎಂದರೆ ಸರಿ. ನನ್ನ ತಾಯಿ ಜೀವಂತ ಇರುವವರೆಗೂ ಅವಳೇ ದಾವಾ ಸ್ವತ್ತಿನ ಸಂಪೂರ್ಣ

ಮಾಲಿಕಳು ಆಗಿದ್ದಳು ಎಂದರೆ ಸರಿಯಲ್ಲ. ನನ್ನ ತಾಯಿ ದಾವಾ ಸ್ವತ್ತುನ್ನು ಖರೀದಿಸಿರುವ ಕಾರಣ ಅವಳಿಗೆ ಹಿಭಾ ಮಾಡಿಕೊಡುವ ಸಂಪೂರ್ಣ ಅಧಿಕಾರ ಇತ್ತು ಎಂದರೆ ಸರಿಯಲ್ಲ. 2007 ರಿಂದ ಹಿಭಾ ನಾತೆಯಿಂದ 1 ನೇ ಪ್ರತಿವಾದಿ ದಾವಾ ಸ್ವತ್ತಿನ ಸಂಪೂರ್ಣ ಮಾಲಿಕನು ಮತ್ತು ಕಬ್ಜೆದಾರನು ಇರುತ್ತಾನೆ ಎಂದರೆ ಸರಿಯಲ್ಲ. ಸದರಿ ಹಿಭಾ ನಾತೆಯಿಂದ 1 ನೇ ಪ್ರತಿವಾದಿ ದಾವಾ ಸ್ವತ್ತಿನ ಮನೆ ಮತ್ತು ಜಮೀನುಗಳಲ್ಲಿ ತನ್ನ ಹೆಸರನ್ನು ಹಚ್ಚಿಕೊಂಡು ಮಾಲಿಕ ಮತ್ತು ಕಬ್ಜೆದಾರನು ಇರುತ್ತಾನೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ.2 ರ ಮನೆಯನ್ನು ನನ್ನ ತಾಯಿ ಸ್ವಂತ ಹಣದಿಂದ ಖರೀದಿಸಿದ ಕಾರಣ ಸದರಿ ಮನೆಯಲ್ಲಿ ಅವಳ ಜೀವಂತ ಕಾಲಕ್ಕೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಮರಣಾಂತರ ಕೂಡಾ ಅವಳು ಹಿಭಾ ಮಾಡಿಕೊಟ್ಟ ಕಾರಣ ಸದರಿ ಮನೆಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲಾ ಎಂದರೆ ಸರಿಯಲ್ಲ. ಸೈಯದ್ ಮುಸಾಅಲಿ ರವರು ನನ್ನ ದೊಡ್ಡ ಅಣ್ಣ ರವರು ತಿರಿಕೊಂಡ ನಂತರ ನನ್ನ ತಾಯಿ ತಿರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ಸಹೋದರ ಮುಸಾಅಲಿ ನನ್ನ ತಂದೆ ತಿರಿಕೊಳ್ಳುವ ಮುಂಚೆ ತಿರಿಕೊಂಡಿರುತ್ತಾರೆ ಎಂದರೆ ಸರಿ.

ನನ್ನ ತಾಯಿ ಎಲ್ಲಾ ಆಗುಹೋಗುಗಳನ್ನು 1 ನೇ ಪ್ರತಿವಾದಿ ನೋಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನನ್ನ ತಾಯಿ ತಿರಿಕೊಳ್ಳುವ ಕಾಲಕ್ಕೆ ಅವಳ ಎಲ್ಲಾ ಆಗುಹೋಗುಗಳನ್ನು 1 ನೇ ಪ್ರತಿವಾದಿ ನೋಡಿಕೊಂಡ ಕಾರಣ ನನ್ನ ತಾಯಿ ಅವರಿಗೆ ಮನಸಾ ಪೂರ್ವಕ ಹಿಭಾ ಮಾಡಿಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. ಡಾಃ ಆಥಾಯುರ್ ರೇಹಮಾನ್ ರವರು ನನ್ನ

ದೊಡ್ಡ ಅಕ್ಕಳಾದ 1 ನೇ ವಾದಿಯ ಮೊದಲನೆ ಗಂಡ ಇರುತ್ತಾನೆ. ಆತ ತಿರಿಕೊಂಡ ನಂತರ 1 ನೇ ವಾದಿ 2 ನೇ ಗಂಡನಾದ ಇನಾಮಉದ್ದಿನ್‌ನ್ನು ಮದುವೆಯಾಗಿರುತ್ತಾರೆ. ಸುಮಾರು 40 ವರ್ಷಗಳ ಹಿಂದೆ ಸದರಿ ಡಾಃ ಅಥಾಯುರ್ ರೇಹಮಾನ್ ರವರು ತಿರಿಕೊಂಡಿರುತ್ತಾರೆ ಎಂದರೆ ಸರಿ. ಅವರು ತಿರಿಕೊಂಡ ನಂತರ 2 ನೇ ಮದುವೆ ಇನಾಮಉದ್ದಿನ್ ಜೊತೆ 10 ವರ್ಷದ ನಂತರ ಆಗಿರುತ್ತದೆ ಎಂದರೆ ಸರಿ. ಸದರಿ ಮದುವೆಗೆ 1 ನೇ ಪ್ರತಿವಾದಿ ರೂ.50,000/- ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಿಃ 25.11.2014 ರಂದು ನಾನು ಮತ್ತು 1 ನೇ ವಾದಿ ಕೂಡಿಕೊಂಡು 1 ನೇ ಪ್ರತಿವಾದಿಗೆ ನಮಗೆ ಬರಬೇಕಾದ ಭಾಗದ ಪೈಕಿ ತಲಾ ರೂ.3,00,000/- ತೆಗೆದುಕೊಂಡು ರೂ.100/- ಛಾಪಾ ಕಾಗದದ ಮೇಲೆ ತಕರಾರು ಇಲ್ಲಾ ಎಂದು ನಮ್ಮ ಹಕ್ಕನ್ನು ಬಿಟ್ಟುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಛಾಯಾಚಿತ್ರ ಮತ್ತು ಸಹಿ ನೋಡಿದರೆ ಗುರುತಿಸುತ್ತೇನೆ.

(ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**